# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 459 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-12-2024 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| (ಅ) | ದಿನಾಂಕ: 08.10.2024 ರಂದು ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡ್ ಬಿ. ಪಟ್ಟಣದ ಪುರಸಭೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಕೊಠಡಿ ಉದ್ಘಾಟನೆ ಸಮಾರಂಭದಲ್ಲಿ ಗಲಭೆ/ ಘಟನೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಘಟನೆ ಪೂರ್ಣ ವಿವರ ನೀಡುವುದು) | ಹೌದು.<br><br>ಶ್ರೀಮತಿ ನಸರೀನ್ ಬೇಗಂ ಉಪಾಧ್ಯಕ್ಷರು, ಹಳ್ಳಿಖೇಡ .ಬಿ ಪುರಸಭೆ ರವರು ನೀಡಿದ ದೂರಿನ ಸಾರಾಂಶವೇನೆಂದರೆ, ದಿನಾಂಕ: 08.10.2024 ರಂದು ಪುರಸಭೆ ಹಳ್ಳಿಖೇಡ .ಬಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಕೊಠಡಿ ಉದ್ಘಾಟನೆ ಕಾರ್ಯಕ್ರಮಕ್ಕೆ ಸ್ಥಳೀಯ ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವರನ್ನು ಆಹ್ವಾನಿಸಲಾಗಿರುತ್ತದೆ. ಕೊಠಡಿ ಉದ್ಘಾಟನೆಯ ನಂತರ ಸದರಿ ಕಾರ್ಯಕ್ರಮದ ಅಂಗವಾಗಿ ಸಭೆಯನ್ನು ನಡೆಸುತ್ತಿದ್ದಾಗ ಮಧ್ಯಾಹ್ನ 1:00 ಗಂಟೆ ಸುಮಾರಿಗೆ ಹಳ್ಳಿಖೇಡ .ಬಿ ಪುರಸಭೆ ಸದಸ್ಯರು ಹಾಗೂ ಅವರ ಹಿಂಬಾಲಕರು ಬಂದು ಪೂರ್ವ ನಿಯೋಜಿತವಾಗಿ ಸಿದ್ದತೆ ಮಾಡಿಕೊಂಡು ಸರ್ಕಾರಿ ಕಛೇರಿಯ ಮುಖ್ಯದ್ವಾರವನ್ನು ಮುಚ್ಚಿ ಕರ್ತವ್ಯಕ್ಕೆ ಅಡ್ಡಿಪಡಿಸುವುದರೊಂದಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಅಧ್ಯಕ್ಷರಾದ ಶ್ರೀಮತಿ ಜಗದೇವಿ ಗಂಡ ರಾಜು ಶಂಕೆ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ನಸರೀನ್ ಬೇಗಂ ಗಂಡ ಎಂ.ಡಿ ಗೌಸೋದ್ದಿನ್ ಹಾಗೂ ಪುರಸಭೆಯ ಎಲ್ಲಾ ಕಾಂಗ್ರೇಸ್ ಸದಸ್ಯರಿಗೆ ಮನಬಂದಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಅಗೌರವ ತೋರುವುದರೊಂದಿಗೆ ಗುಂಡಾವರ್ತನೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ. 1) ರೇವಪ್ಪ ತಂದೆ ಗುರುಲಿಂಗಪ್ಪಾ ಓಲದೊಡ್ಡಿ ಹಾಗೂ ಇತರೆ 13 ಜನರು ಎಲ್ಲರೂ ಹಳ್ಳಿಖೇಡ (ಬಿ) ನಿವಾಸಿಗಳಾಗಿದ್ದು ಹಾಗೂ ಪಟ್ಟಣದಲ್ಲಿ ಶಾಂತಿ ಭಂಗಮಾಡಿ ಸಾರ್ವಜನಿಕ ಕಛೇರಿ ಮುಚ್ಚಿ ಗುಂಡಾವರ್ತನೆ ತೋರಿ ಕಾರ್ಯಕ್ರಮ ಮುಂದುವರೆಸಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುವವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿರುತ್ತದೆ. |

....2

| | | |
|---|---|---|
| (ಆ) | ಬಂದಿದ್ದಲ್ಲಿ, ಈ ಘಟನೆ ಸಂಬಂಧವಾಗಿ ದಿನಾಂಕ: 10.10.2024 ರಂದು ಹಳ್ಳಿಖೇಡ್ ಬಿ. ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿರುವುದು ನಿಜವಲ್ಲವೇ; (ಎಫ್.ಐ.ಆರ್. ದಾಖಲಾಗಿರುವವರ ಹೆಸರು ಸಮೇತ ವಿವರ ಒದಗಿಸುವುದು) | ಈ ಘಟನೆ ಸಂಬಂಧವಾಗಿ ದಿನಾಂಕ: 10.10.2024 ರಂದು ಹಳ್ಳಿಖೇಡ್ .ಬಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 106/2024 ಕಲಂ ಭಾರತೀಯ ನ್ಯಾಯ ಸಂಹಿತೆ ಕಲಂ 2023 (ಕಲಂ 189(2), 190, 191(2), 191(3), 351(2), 352 ರಡಿ ಪ್ರಕರಣ ದಾಖಲಾಗಿರುತ್ತದೆ.<br><br>ಪ್ರಕರಣದ ಪಿರ್ಯಾದಿದಾರರು:- ಶ್ರೀಮತಿ ನಸರೀನ್ ಬೇಗಂ ಗಂಡ ಗೌಸೋದ್ದಿನ್ ಉಪಾಧ್ಯಕ್ಷರು ಹಳ್ಳಿಖೇಡ್, ಪುರಸಭೆ, ಸಾ\|\| ಹಳ್ಳಿಖೇಡ್.<br><br>ಪ್ರಕರಣದ ಆರೋಪಿತರು:- (ಸಾರ್ವಜನಿಕ ದಾಖಲೆಯಾದ ಪ್ರಥಮ ವರ್ತಮಾನ ವರದಿ ಪ್ರಕಾರ)<br><br>1. ರೇವಪ್ಪಾ ತಂದೆ ಗುರುಲಿಂಗಪ್ಪಾ ಒಳದೋಡ್ಡಿ ಸಾ\|\| ಹಳ್ಳಿಖೇಡ್ ಬಿ.<br>2. ವೇದಪ್ರಕಾಶ ಹಲಶೇಟ್ಟಿ ತಂದೆ ಬಾಲಚಂದ್ರ ಸಾ\|\| ಹಳ್ಳಿಖೇಡ್<br>3. ವೀರೇಶ ತಂದೆ ಶಿವಶರಣಪ್ಪಾ ಒಳದೋಡ್ಡಿ ಸಾ\|\| ಹಳ್ಳಿಖೇಡ್ ಬಿ.<br>4. ಮಹೇಶ ತಂದೆ ಶಿವನಂದ ಹಡಪ್ಪದ ಸಾ\|\| ಹಳ್ಳಿಖೇಡ್ ಬಿ.<br>5. ಫಾಳೆಪ್ಪಾ ತಂದೆ ಕಲ್ಲಪ್ಪಾ ಜೈನಾಪೂರ ಸಾ\|\| ಹಳ್ಳಿಖೇಡ್ ಬಿ.<br>6. ನರಸಿಂಗ ತಂದೆ ತುಕರಾಮ ಸಾಗರ ಸಾ\|\| ಹಳ್ಳಿಖೇಡ್ ಬಿ.<br>7. ಪ್ರಕಾಶ ತಂದೆ ಶಿವರಾಜ ತಿಬಶೇಟ್ಟಿ ಸಾ\|\| ಹಳ್ಳಿಖೇಡ್ ಬಿ.<br>8. ಲೋಕೇಶ ತಂದೆ ಶಿವರಾಜ ತಿಬಶೇಟ್ಟಿ ಸಾ\|\| ಹಳ್ಳಿಖೇಡ್ ಬಿ.<br>9. ಜಗನಾಥ ತಂದೆ ಕಲ್ಲಪ್ಪಾ ಸಂಗೋಳ್ಳಗಿ ಸಾ\|\| ಹಳ್ಳಿಖೇಡ್ ಬಿ.<br>10. ಅನೀಲಕುಮಾರ ತಂದೆ ಪುಂಡಲಿಕ ಬಾವಗಿ ಸಾ\|\| ಹಳ್ಳಿಖೇಡ್ ಬಿ.<br>11. ಮುರಳಿ ತಂದೆ ನಾರಾಯಣರಾವ ಪುಸನ್ಗಿರಿ ಸಾ\|\| ಹಳ್ಳಿಖೇಡ್ ಬಿ.<br>12. ಸುಶಿಲ್ ತಂದೆ ಕಾಶಿನಾತ ಮರಪಳ್ಳಿಕರ್ ಸಾ\|\| ಹಳ್ಳಿಖೇಡ್ ಬಿ.<br>13. ಪ್ರಭು ತಂದೆ ಬಸಯ್ಯಾ ಸ್ವಾಮಿ ಸಾ\|\| ಹಳ್ಳಿಖೇಡ್ ಬಿ.<br>14. ರುದ್ರಮುನಿ ಸ್ವಾಮಿ ಹಾಗೂ ಇತರರು ಸಾ\|\| ಹಳ್ಳಿಖೇಡ್ ಬಿ. |

....3

| | | |
|---|---|---|
| (ಇ) | ಮೇಲ್ಕಂಡ ಪ್ರಕರಣದಲ್ಲಿ ಮೊದಲು ಹಳ್ಳಿಖೇಡ್ ಬಿ. ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಿಸಿ ಅನಂತರ ಈ ಪ್ರಕರಣವನ್ನು ಬೀದರ್ ಗಾಂಧಿಗಂಜ್ ಪೊಲೀಸ್ ಠಾಣೆಗೆ ವರ್ಗಾಯಿಸಿರುವುದಕ್ಕೆ ಕಾರಣವೇನು; | ರಾಜಕೀಯ ಕಾರ್ಯಕರ್ತರ ನಡುವೆ ರಾಜಕೀಯ ವೈಷಮ್ಯ ಇದ್ದು ಸ್ಥಳೀಯ ತನಿಖಾಧಿಕಾರಿಯವರ ಮೇಲೆ ಎರಡೂ ಪಕ್ಷದ ಕಡೆಯಿಂದ ಒತ್ತಡ ಬರುವ ಸಾಧ್ಯತೆ ಇರುವುದರಿಂದ ಹಳ್ಳಿಖೇಡ ಪಿಎಸ್‌ಐ ಬದಲಾಗಿ ಬೀದರ್ ನಗರದ ಗಾಂಧಿಗಂಜ್ ಠಾಣೆಯ ಪಿಐ ರವರಿಗೆ ಪ್ರಕರಣವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆ. |
| (ಈ) | ಮೇಲ್ಕಂಡ ಪ್ರಕರಣ ದಾಖಲಾಗಿ ಸುಮಾರು 02 ತಿಂಗಳಾದರೂ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಇಲ್ಲಿಯವರೆಗೆ ಯಾವುದೇ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು; | ಇದೊಂದು Non-heinous ಪ್ರಕರಣವಾಗಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯದ Lalitakumari V/S Government of UP and Others ಪ್ರಕರಣದಲ್ಲಿ ಆದೇಶಿಸಿದಂತೆ ಸದರಿ ಪ್ರಕರಣದಲ್ಲಿ ಹೆಚ್ಚಿನ ಶಿಕ್ಷೆಯುಳ್ಳ ಕಲಂ ಭಾರತೀಯ ನ್ಯಾಯಾ ಸಂಹಿತೆ 2023 ಕಲಂ 189(2) (2 ವರ್ಷ ಜೈಲು ಶಿಕ್ಷೆ ಅಥವಾ ದಂಡ) ಇದ್ದುದರಿಂದ ಕಲಂ 35(3) ಬಿಎನ್‌ಎಸ್‌ಎಸ್ ಪ್ರಕಾರ 1 ರಿಂದ 14ರವರೆಗಿನ ಆರೋಪಿಗಳಿಗೆ ದಿನಾಂಕ :22.11.2024ರಂದು ನೋಟಿಸ್ ಜಾರಿ ಮಾಡಿದ್ದು, ಸದರಿಯವರು ದಿನಾಂಕ :23.11.2024 ರಂದು ತನಿಖಾಧಿಕಾರಿಗಳ ಮುಂದೆ ಹಾಜರಾಗಿರುತ್ತಾರೆ. ದಿನಾಂಕ :28.11.2024 ರಂದು ಈ ಎಲ್ಲಾ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿದೆ. ಮಾನ್ಯ ನ್ಯಾಯಾಲಯವು ಪ್ರಕರಣದ ಸಂಜ್ಞೆ ತೆಗೆದುಕೊಳ್ಳುವ ಕುರಿತು ಬಾಕಿ ಇರುತ್ತದೆ. |
| (ಉ) | ಮೇಲ್ಕಂಡ ಪ್ರಕರಣ ಹಾಗೂ ಭಾಗಿಯಾಗಿರುವವರ ಬಗ್ಗೆ ಕ್ರಮ ಕೈಗೊಳು ವಲ್ಲಿ ವಿಳಂಬವಾಗಿರುವುದು ಇಲಾಖೆಯ ವೈಫಲ್ಯಕ್ಕೆ ಕಾರಣವಲ್ಲವೇ; ಹಾಗಿದ್ದಲ್ಲಿ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಆರೋಪಿಗಳ ಮೇಲೆ ತುರ್ತಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳುವುದೇ? | ಸದರಿ ಪ್ರಕರದಲ್ಲಿ ಭಾಗಿಯಾಗಿರುವವರ ವಿರುದ್ಧ ಕ್ರಮಕೈಕೊಳ್ಳುವಲ್ಲಿ ವಿಳಂಬವಾಗಿರುವುದಿಲ್ಲ. ಹಳ್ಳಿಖೇಡ್ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 106/24 ದಿನಾಂಕ:10.10.2024ರಂದು ದಾಖಲಾಗಿದ್ದು ದಿನಾಂಕ:28.11.2024ರಂದು ಸಂಪೂರ್ಣ ತನಿಖೆ ಮುಗಿಸಿ ಮಾನ್ಯ ನ್ಯಾಯಾಲಯಕ್ಕೆ 48 ದಿನಗಳಲ್ಲಿ ದೋಷಾರೋಪಣೆ ಸಲ್ಲಿಸಲಾಗಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ. ಮಾನ್ಯ ನ್ಯಾಯಾಲಯವು ಪ್ರಕರಣದ ಸಂಜ್ಞೆ ತೆಗೆದುಕೊಳ್ಳುವ ಕುರಿತು ಬಾಕಿ ಇರುತ್ತದೆ. |

ಸಂಖ್ಯೆ: ಹೆಚ್‌ಡಿ 70 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು